ಓ.ಎಸ್.ಸಂ.**205/2017 /**ಪಿಡಬ್ಲೂ.**1**

<u>ದಿನಾಂಕ **12-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಡಿ ಬಿ ಪಿ ವಕೀಲರಿಂದಃ</u>

ನಾನು _ದ್ವಿತಿಯ ಪಿ ಯು ಸಿ ವರಗೊ ಮರಾಠೀ ಹಾಗೂ ಇಂಗೀಷ ಮಾಧ್ಯಮದಲ್ಲಿ ವಿದ್ಯಬ್ಯಾಸ ಮಾಡಿದ್ದೇನೆ. ವಾದಿ ನನ್ನ ತಾಯಿ. ವಾದ ಪತ್ರ ತಯಾರಿಸಲು ಮಾಹಿತಿಯನ್ನು ನಾನು ಹಾಗೂ ನನ್ನ ತಾಯಿ ಕೊಟ್ಟಿದ್ದೆವು. ವಾದ ಪತ್ರವನ್ನು ನನ್ನ ತಾಯಿಗೆ ಓದಿ ಹೇಳಿದ್ದರು.ದಾವಾ ಸಂಖ್ಯೆ ನಂ 105/13 ರ ಬಗ್ಗೆ ನನಗೆ ವ್ಯಯಿಕ್ತಿಕ ಮಾಹಿತಿ ಇದೆ. ದಾವಾ ಸಂಖ್ಯೆ 269/14 ರ ಬಗ್ಗೆ ನನಗೆ ವ್ಯಯಕ್ತಿಕ ಮಾಹಿತಿ ಇಲ್ಲ. ದಾವಾ ಸಂಖ್ಯೆ 269/14 ರಲ್ಲಿ ಯಾರು ಪಕ್ಷಗಾರು ಇದ್ದರು, ದಾವಾ ಏನು ಆಸ್ತಿ ಎನು ಇತ್ತು ಮತ್ತು ಏನು ಪರಿಹಾರ ಕೇಳಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾವಾದಲ್ಲಿ ಆದ ರಾಜಿಯಲ್ಲಿ ಯಾರಿಗೆ ಯಾವ ಪಾಲು ನೀಡಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಕುಟುಂಬದ ಮೂಲ ಪುರುಷ ಶ್ರೀಪತಿ ಕಲ್ಲಾ ಕಾಂಬಳೆ ಎಂದರೆ ಸರಿ . ಅವರಿಗೆ ವಾದಿ ಹಾಗೂ ಶರದ ಎಂಬ ಇಬ್ಬರೂ ಮಕ್ಕಳು ಎಂದರೆ ಸರಿ . ಶರದ ಈತನ ಹೆಂಡತಿ ಮರಣ ಹೊಂದಿದ್ದು ಅವರಿಗೆ ರಜನಿ ಮತ್ತು ರಾಹುಲ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ . ರಜನಿ ರಾಹುಲ ಹಾಗೂ ನನ್ನ ತಾಯಿ ನಡುವಿ ನಮ್ಮ ಹಿರಿಯರ ಆಸ್ತಿಗೆ ಸಂಬಂದಪಟ್ಟಂತೆ ದಾವೆ ಇದೆ ಎಂದರೆ ಸರಿ . ನನ್ನ ಅಜ್ಜ ಶ್ರೀಪತಿ ಕಾಂಬಳೆ ರವರು ಮಾಯಪ್ಪ ಇವರಿಂದ ಖರೀದಿಸಿದ ಆಸ್ತಿಯ ಅಳತೆ 13*42 ಅಡಿ ಎಂದರೆ ಸರಿಯಲ್ಲ. ಸಾಕ್ಷಿ ಆಸ್ತಿಯ ಅಳತೆ 13*42 ಮತ್ತು 28*32 ಅಡಿ ಎಂದು ನುಡಿಯುತ್ತಾರೆ. ಮಾಯಪ್ಪ ಇವರು 1 ನೇ ಪ್ರತಿವಾದಿಯ ತಂದೆ ಎಂದರೆ ಸರಿ .

2. ಸಾಕ್ಷಿಗೆ ಈಗ 1 ದಾಖಲೆಯನ್ನು ತೊರಿಸತ್ತಿದ್ದು, ಸದರಿ ದಾಖಲೆ ನನ್ನ ಅಜ್ಜ ಖರೀಸಿದ ಆಸ್ತಿಯ ಖರೀದಿ ಪತ್ರದ ದೃಡಿಕೃತ ನಕಲು ಎಂದರೆ ಸರಿ .ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿದ್ದರಿಂದ ದಿಃ 02-07-1951 ರ ನೊಂದಾಯಿತ ಕ್ರಯ ಪತ್ರದ ದೃಡಿಕೃತ ನಕಲನ್ನು ನಿ. ಡಿ 1 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಈಗಾಗಲೇ ನಿಪಿ 19 ಎಂದು ಗುರುತಿಸಲಾಗಿದೆ. ನನ್ನ ಅಜ್ಜ 13*42 ಅಡಿ ಮತ್ತು 28*32 ಅಡಿ ಅಳತೆಯ ಜಾಗ ಖರೀದಿಸಿದ್ದರು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಅಜ್ಜ 1997 ರಲ್ಲಿ ಮರಣ ಹೊಂದಿದ್ದರು. ಆಗ ನಾನು ಹುಟ್ಟಿದ್ದೆ. ಆಗ ನನಗೆ 10-11 ವಯಸ್ಸು ಆಗಿತ್ತು. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು ಅನ್ನು 28 ಎಂದು ಬರೆಯಿಸಿರುವುದು ಸರಿ ಇರುತ್ತದೆ. ನನಗೆ ಖರೀದಿ ಪತ್ರದ ಬಗ್ಗೆ ಮತ್ತು ಪಂಚಯಿತಿ ದಾಖಲೆ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧರಾದ ಮೇಲೆ ಪಂಚಯಾತಿ ದಾಖಲೆಗಳಲ್ಲಿ ಇರುವ ಜಾಗದ ಅಳತೆ ಸಂಬಂದಪಟ್ಟಂತೆ ನಾನು ದಾಖಲೆಗಳನ್ನು ನೋಡಿದ್ದೇನೆ. ಖರೀದಿ ಪತ್ರದ ಪ್ರಕಾರ ಯಾವ ವರ್ಷ ದಲ್ಲಿ ನನ್ನ ಅಜ್ಜನ ಹೆಸರು ಪಂಚಾಯಾತಿ ದಾಖಲೆಗಳಲ್ಲಿ ನಮೂದು ಆಯಿತು ಎಂದು ನನಗೆ ಗೊತ್ತಿಲ್ಲ. ಯಾವ ಠರವು ಸಂಖ್ಯೆ ಪ್ರಕಾರ ನನ್ನ ಅಜ್ಜನ ಹೆಸರು ಪಂಚಾಯಾತಿ ದಾಖಲೆಗಳಲ್ಲಿ ನಮೂದು ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಠರಾವು ನಾನು ನೋಡಿಲ್ಲ. ನೋಡಲು ಅಡಚಣೆ ಇರಲಿಲ್ಲ. ಈ ದಾವೆಯಲ್ಲಿನ ದಾವಾ ಆಸ್ತಿ ಬಗ್ಗೆ ನನಗೆ ಮಾಹಿತಿ ಇದೆ.

3. ನನ್ನ ಅಜ್ಜ ಖರೀಸಿದ ಎರಡು ಆಸ್ತಿಗಳ ಚಕ್ಕ ಬಂದಿ ನನಗೆ ಹೇಳಲು ಬರುತ್ತದೆ. 28*32 ಅಡಿ ಆಸ್ತಿ ಯ ಚಕಬಂದಿ ಪೂರ್ವಕ್ಕೆ ಮನೂಹರ ಬಾಹು ಕಾಂಬಳೆ ಮತ್ತು ಪಶ್ಚಿಮಕ್ಕೆ ಸಮಾಯಕ ಎರಡು ಅಡಿ ಬೊಳ ನಂತರ ಕೌತಕ ಶಂಕರ ಕಾಂಬಳೆ ರವರ ಆಸ್ತಿ. ದಕ್ಷಿಣಕ್ಕೆ 1 ನೇ ಪ್ರತಿವಾದಿ ಆಸ್ತಿ. ಉತ್ತರಕ್ಕೆ

ಸರಕಾರಿ ರಸ್ತೆ ಇರುತ್ತದೆ. 13*42 ಅಡಿ ಆಸ್ತಿಯ ಚಕ್ಕಬಂದಿ ಹೇಳಿ ಎಂದರೆ ಸಾಕ್ಷಿಯು "ನಾನು ಖರೀದಿಯ ಒಟ್ಟು ಚಕ್ಕಬಂದಿ ಹೇಳಿದ್ದೇನೆ." ಎಂದು ನುಡಿಯುತ್ತಾರೆ. ನಾನು ಮೇಲಿ ಹೇಳಿದ ಚಕ್ಕಬಂದಿ 13*42 ಅಡಿ ಮತ್ತು 28*32 ಅಡಿ ಅಸ್ತಿಯ ಚಕ್ಕಬಂದಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಅಥವಾ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಅಸ್ತಿಯ ಅಳತೆಯನ್ನು ಕೊಟ್ಟ ಬಗ್ಗೆ ನನಗೆ ಮಾಹಿತಿ ಇದೆ. ನಾವು ದಾವಾ ಆಸ್ತಿಯ ಅಳತೆಯನ್ನು ಕೊಟ್ಟಿದೇವೆ. ಉದ್ದೇಶ ಪೂರ್ವಕವಾಗಿ ಪ್ರತಿವಾದಿ ಆಸ್ತಿಯನ್ನು ಕಬಳಿಸಬೇಕು ಎಂಬ ಕಾರಣಕ್ಕೆ ದಾವಾ ಆಸ್ತಿಯ ಅಳತೆಯನ್ನು ನಾವು ವಾದ ಪತ್ರದಲ್ಲಿ ಅಥವಾ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ .

4. ನಾವು ದಾವಾ ಆಸ್ತಿಯ ಮೇಲೆ ಖರೀದಿ ಪತ್ರದ ಅಧಾರದ ಮೇಲೆ ಹಕ್ಕನ್ನು ಪ್ರತಿಪಾದಿಸುತ್ತಿದ್ದೆವೆ. ನಾವು ಖರೀದಿ ಪತ್ರದ ಆಧಾರದ ಮೇಲೆ ದಾವಾ ಆಸ್ತಿಯ ಸ್ವಾಧಿನ ದಲ್ಲಿ ಇದ್ದೆವೆ ಎಂದು ಪ್ರತಿಪಾದಿಸುತ್ತಿದ್ದೆವೆ. ವಾದ ಪತ್ರದೊಂದಿಗೆ ತೋರಿಸರುವ ಕೈನಕ್ಷೆ ತಪ್ಪು ಹಾಗೂ ಕಾಲ್ಪನಿಕ ಆಗಿದೆ ಎಂದರೆ ಸರಿಯಲ್ಲ .

5. ಪ್ರತಿವಾದಿಗಳ ಆಸ್ತಿಯ ಸಂಖ್ಯೆ 911 ಅಂದರೆ ಸರಿ . ನನಗೆ ಅದರ ಅಳತೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅದರ ಅಳತೆ 17*18 ಅಡಿ ಇರುತ್ತದೆ. ದಿಃ 02-07-1951 ರಂದು ನನ್ನ ಅಜ್ಜ ಖರೀದಿಸಿದ ಆಸ್ತಿಯ ಉಳಿಕ್ಕೆ ಭಾಗ ಪ್ರತಿವಾದಿಯರದ್ದು ಎಂದರೆ ಸರಿ . ಮಾಯಪ್ಪನವರ 28*60 ಅಡಿ ಜಾಗದಿಂದ ನನ್ನ ಅಜ್ಜ ಖರೀದಿ ಮಾಡಿರುತ್ತಾರೆ.

(ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಂದುರಿದ ಪಾಟೀ ಸವಾಲು ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

**ಓ.ಹೆ.ಕೆ.ಸರಿ ಇದೆ.**

**(ಅಶೋಕ ಆರ್ ಎಚ್)**
**1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.**